ಅಧ್ಯಕ್ಷರು:- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸಲಾಯಿತು.

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು.

ವಿಷಯ: (ಅ) ಹಿರೇನಂದಿಹಳ್ಳಿಗೆ ಮಂಜೂರಾಗಿದ್ದ ಪ್ರೌಢಶಾಲೆಯನ್ನು ಮುರ್ಕಿನಾವೆಗೆ ವರ್ಗಾಯಿಸಿರುವುದು.

ಶ್ರೀ ಡಿ.ಬಿ.ಇನಾಂದಾರ್ (ಕಿತ್ತೂರು):- ಮಾನ್ಯ ಅಧ್ಯಕ್ಷರೆ, ನನ್ನ ಕಿತ್ತೂರು ಕ್ಷೇತ್ರದ ವ್ಯಾಪ್ತಿಗೊಳಪಡುವ ಬೆಳಗಾಂ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಹಿರೇನಂದಿಹಳ್ಳಿಗೆ ದಿನಾಂಕ 21ನೇ ಜೂನ್ 1996ರಂದು ಶಿಕ್ಷಣ ಇಲಾಖೆಯಿಂದ ಒಂದು ಪ್ರೌಢಶಾಲೆ ಮಂಜೂರಾಗಿದ್ದು, ಆ ಶಾಲೆ ನಾಲ್ಕನೇ ಜುಲೈ 1996ರಂದು ಪ್ರಾರಂಭವಾಯಿತು, ಶಾಲೆಗೆ ಒಬ್ಬ ಶಿಕ್ಷಕರನ್ನು ಸಹ ನೇಮಿಸಲಾಗಿದ್ದಿತು. ಆದರೆ, ಶಾಲೆ ಪ್ರಾರಂಭವಾಗಿ ನಾಲ್ಕು ದಿವಸಗಳಾದ ನಂತರ ಸದರಿ ಶಾಲೆಯನ್ನು ಮುರ್ಕಿನಾವೆ, ಬೈಲಹೊಂಗಲ ತಾಲ್ಲೂಕು, ಬೆಳಗಾಂ ಜಿಲ್ಲೆಗೆ ವರ್ಗಾಯಿಸಿರುವುದು ಸರಿಯಲ್ಲ. ಆದ್ದರಿಂದ ದಯಮಾಡಿ ಮೊದಲು ಪ್ರೌಢಶಾಲೆಯನ್ನು ಮಂಜೂರು ಮಾಡಿದ ಸ್ಥಳದಲ್ಲಿಯೇ ಪುನಃ ಪ್ರಾರಂಭ ಮಾಡಬೇಕೆಂದು ನಾನು ತಮ್ಮ ಮೂಲಕ ಸಂಬಂಧಪಟ್ಟ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಸದಸ್ಯರು ತಮ್ಮ ಕ್ಷೇತ್ರದಲ್ಲಿ ಮಂಜೂರಾಗಿದ್ದ ಶಾಲೆಯನ್ನು ಬೇರೆಡೆಗೆ ವರ್ಗಾಯಿಸಿರುವ ವಿಷಯವನ್ನು ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ಹೇಳುವುದಾದರೆ, ಇದೇ ರೀತಿ ನಾಲ್ಕೈದು ಕಡೆಗಳಲ್ಲಿ ಸರ್ಕಾರ ಶಾಲೆಗಳನ್ನು ಮಂಜೂರು ಮಾಡಿ, ಆ ಶಾಲೆಗಳು ಪ್ರಾರಂಭವಾದ ಐದಾರು ದಿವಸಗಳ ನಂತರ ಶಾಲೆಗಳನ್ನು ಮುಚ್ಚಬೇಕೆಂದು ಟೆಲಿಗ್ರಾಂ ಕೊಟ್ಟು, ಬೇರೆಡೆಗೆ ವರ್ಗಾಯಿಸುತ್ತಾರೆ. ಇದು ಸರಿಯಲ್ಲ.

ಅಧ್ಯಕ್ಷರು:- ಮೊನ್ನೆ ದಿವಸ ಮಾನ್ಯ ಸದಸ್ಯರಾದ ದೇವುನಾಯಕ್ ಬೆಳಮಗಿಯವರು ಹೇಳಿದರು: ಪ್ರತಿಪಕ್ಷದಿಂದ ಆರಿಸಿಬಂದಿರುವ ಶಾಸಕರ ಮತಕ್ಷೇತ್ರದಲ್ಲಿ ಈ ರೀತಿಯಾದಾಗ kindly see that some remedial measure is taken.

ಶ್ರೀ ಜೆ.ಹೆಚ್.ಪಟೇಲ್:- ಇಂತಹ ಪ್ರಕರಣಗಳಿದ್ದರೆ ತರಿಸಿಕೊಂದು ನೋಡುತ್ತೇನೆ.

(ಆ) ಪೌರ ಕಾರ್ಮಿಕರಿಗೆ ಸರಿಯಾಗಿ ಸಂಬಳ ಪಾವತಿಗೆ ಒತ್ತಾಯ.

+ಶ್ರೀ ಬಿ.ಎನ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ನಮಗೆ ಸರಿಯಾಗಿ ತಿಂಗಳ ಒಂದನೆಯ ತಾರೀಖು ಸಂಬಳ ಸಿಗುತ್ತಿಲ್ಲ; ಡಾ.ಜಿ.ತಿಮ್ಮಯ್ಯರವರು ನೀಡಿರುವ ವರದಿಯನ್ನು ಜಾರಿಗೆ ತಂದು, ನೆಮ್ಮದಿಯಿಂದ